ನವಲಗುಂದ ಅಣ್ಣಿಗೇರಿಯಲ್ಲಿ ಕುಡಿಯುವ ನೀರು ಪೂರೈಕೆ ಯೋಜನೆ.

336 - ಶ್ರೀ ಕೆ.ಎಸ್. ಗದ್ದಿ (ನವಲಗುಂದ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವಲಗುಂದ ಅಣ್ಣಿಗೇರಿಯಲ್ಲಿ ಶಾಶ್ವತ ಕುಡಿಯುವ ನೀರು ಪೂರೈಕೆಯ ಯೋಜನೆಯು ಮಂಜೂರಾತಿ 3 ವರ್ಷಗಳಾದರೂ ಕೆಲಸ ಪ್ರಾರಂಭಿಸದೇ ಇರುವ ಕಾರಣವೇನು?

ಆ) ಈ ಯೋಜನೆಗೆ ಬೇಕಾಗುವ ಭೂಸ್ವಾಧೀನವನ್ನು ಪುರಸಭೆಯಿಂದ ನೀಡುವ ಸಾಧ್ಯವಾಗದೇ ಇರಲು ಕಾರಣಗಳೇನು? ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಈ ಯೋಜನೆಯನ್ನು ಕಾರ್ಯಗತ ಗೊಳಿಸಲು ಕಾಲಮಿತಗೊಳಿಸಿದೆಯೇ, ನಗರದಲ್ಲಿ ಕುಡಿಯುವ ನೀರಿನ ಪೂರೈಕೆಯು ಗಂಭೀರ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಕೂಡಲೇ ಈ ತೊಂದರೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗಿರುವುದೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಯೋಜನೆಯಲ್ಲಿ ಜಲಸಂಗ್ರಹಣಾ ಕೆರೆಗೆ ಆಗತ್ಯವಿರುವ ಭೂಮಿಯನ್ನು ಪುರಸಭೆ ಸ್ವಾಧೀನ ಪಡಿಸಿಕೊಂಡು ಮಂಡಳಿಗೆ ವಹಿಸಿಲ್ಲವಾದ್ದರಿಂದ ಯೋಜನೆಯನ್ನು ಪ್ರಾರಂಭಿಸಿಲ್ಲ.

ಆ) ಪುರಸಭೆಗಳ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲದಿರುವುದರಿಂದ ಸುಮಾರು 50 ಲಕ್ಷ ರೂ.ಗಳನ್ನು ಭೂಸ್ವಾಧೀನ ವೆಚ್ಚ ಮಾಡುವ ಸ್ಥಿತಿಯಲಿಲ್ಲ. ಯೋಜನೆಗೆ ಆಗತ್ಯವಾದ ಭೂಮಿಯನ್ನು ಪುರಸಭೆಗಳೇ ಕೊಡಬೇಕೆಂದು ಸರ್ಕಾರ ಸೂಚಿಸಿದೆ.

ಇ) ಆಗತ್ಯವಾದ ಭೂಮಿಯ ಸ್ವಾಧೀನವಾದ ನಂತರ 3-4 ವರ್ಷಗಳಾಗುತ್ತದೆ. ಈ ತೊಂದರೆಯನ್ನು ನಿವಾರಿಸಲು ಅಣ್ಣಗೇರಿ ಪಟ್ಟಣದದಲ್ಲಿ ತುತ್ತು ನೀರು ಸರಬಲಾಜು ಯೋಜನೆಯಲ್ಲಿ ಕೊರೆದಿರುವ 12 ಬಾವಿಗಳನ್ನು ಸೇರಿಸಿ ಹಾಲಿ 41 ಕೊಳವೆ ಬಾವಿಗಳಿವೆ. ಇವುಗಳಲ್ಲಿ 23 ಬಾವಿಗಳಿಗೆ ವಿದ್ಯುತ್ ಪಂಪುಗಳನ್ನು 14ಕ್ಕೆ ಕೈ ಪಂಪುಗಳನ್ನು ಅಳವಡಿಸಿದೆ. ಮಿಕ್ಕ 4 ಬಾವಿಗಳು ವಿಫಲವಾಗಿವೆ.

ಇ) ಅಣ್ಣಿಗೇರಿಯಲ್ಲಿ ಮತ್ತೆ 5 ಕೊಳವೆ ಬಾವಿಗಳನ್ನು ಕೊರೆಯುವ 26.00 ಲಕ್ಷ ರೂ. ಮೊತ್ತದ ಒಂದು ತುರ್ತು ಯೋಜನೆಯ ಅಂದಾಜು ಸರ್ಕಾರದ ಪರಿಶೀಲನೆಯಲ್ಲಿದೆ.

ಇದೇ ರೀತಿ ನವಲಗುಂದದಲ್ಲಿ 23 ಕೊಳರೆ ಬಾವಿಗಳನ್ನು ಕೊರೆದಿದ್ದು ಅವುಗಳಲ್ಲಿ 13ಕ್ಕೆ ಕೈ ಪಂಪುಗಳನ್ನು 9ಕ್ಕೆ ವಿದ್ಯುತ್ ಪಂಪುಗಳನ್ನು ಜೋಡಿಸಲಾಗಿದೆ. ಒಂದು ಬಾವಿ ವಿಫಲವಾಗಿದೆ.

ಶ್ರೀ ಕೆ.ಎನ್. ಗದ್ದಿ : ಮಾನ್ಯ ಅಧ್ಯಕ್ಷರೇ ನವಲಗುಂದ ಅಣ್ಣಿಗೇರಿಯಲ್ಲಿ ಶಾಶ್ವತ ಕುಡಿಯುವ ನೀರಿನ ಪೂರೈಕೆ ಯೋಜನೆಯು ಮಂಜೂರಾಗಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಯಾವಾಗ ಮಂಜೂರಾಗಿದೆ ಮತ್ತು ಮಂಜೂರಾದ ಆ ಕಾರ್ಯವನ್ನು ಏಕೆ ಇನ್ನೂ

ಕಾರ್ಯಗತಗೊಳಿಸಿಲ್ಲವೆಂದು ನಾನು ಮಂತ್ರಿಗಳಲ್ಲಿ ಕೇಳುತ್ತೇನೆ. ನವಲಗುಂದ ಅಣ್ಣಿಗೇರಿಯಲ್ಲಿ ಸುಮಾರು 25 ಸಾವಿರ ಜನಸಂಖ್ಯೆ ಇದ್ದು ಅಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ತೀವ್ರವಾಗಿ ಎದುರಿಸುತ್ತಿದ್ದಾರೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಅಲ್ಲಿ 14 ಪಂಪುಗಳನ್ನು ಅಳವಡಿಸಲಾಗಿದೆ 4 ಪಂಪುಗಳನ್ನು ವಿಫಲವಾಗಿದೆಯೆಂದು ತಿಳಿಸಿದ್ದಾರೆ. ಆದರೆ ಸುಮಾರು 3-4 ದಿವಸಗಳ ಹಿಂದೆ 10 ಕೈ ಪಂಪುಗಳನ್ನು ಅಳವಡಿಸಿದ್ದರು. ಆದರೆ ಈಗ ಅದರಲ್ಲಿ...

ಅಧ್ಯಕ್ಷರು : ನಾನು ನಿಮಗೆ ಸಹಾಯ ಮಾಡುತ್ತೇನೆ ನೀವು ಕುಳಿತುಕೊಳ್ಳಿ ಈಗ ಅವರು ಹೊಸ ಸದಸ್ಯರಾಗಿರುವುದರಿಂದ ಪ್ರಶ್ನೆಯನ್ನು ಹೆಚ್ಚು ಯಾವಾಗಲೂ ಕೇಳಿಲ್ಲ. ಅವರ ಪ್ರಶ್ನೆಯ ಉದ್ದೇಶ ಏನೆಂದರೆ, ನೀವು ಉತ್ತರದಲ್ಲಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲಿಕ್ಕೆ ಇನ್ನೂ ಆಗಿಲ್ಲದಿರುವ ಕಾರಣ ಕೆಲಸ ನಿಧಾನವಾಗಿದೆ. ಎಂದು ಹೇಳಿದ್ದೀರಿ. ದಯಮಾಡಿ ಭೂಮಿ ಸ್ವಾಧೀನ ಕಾರ್ಯದ ಹಂತಗಳನ್ನು ನಡವಳಿಕೆಯನ್ನು ಬೇಗ ಮುಗಿಸಿ. ಆದಾದ ಮೇಲೆ 3-4 ವರ್ಷ ಬೇಕು ಎಂದು ಕೇಳಿದ್ದೀರಿ. ಆ ಕುಡಿಯುವ ನೀರಿನ ಯೋಜನೆಯನ್ನು ಬೇಗ ಅನುಷ್ಠಾನಕ್ಕೆ ತನ್ನಿ.

ಶ್ರೀ ಕೆ.ಎನ್. ಗದ್ದಿ : ಅಧ್ಯಕ್ಷರೇ,

ಅಧ್ಯಕ್ಷರು : ಈಗ ನಿಮ್ಮ ಉದ್ದೇಶ ಅಣ್ಣಗೇರಿಯಲ್ಲಿ ಕುಡಿಯುವ ನೀರನ ಕಾರ್ಯಕ್ರಮವನ್ನು ಬೇಗ ಅನುಷ್ಠಾನಕ್ಕೆ ತರಬೇಕು ಎಂದು ಅಲ್ಲವೇ?

ಶ್ರೀ ಕೆ.ಎನ್. ಗದ್ದಿ : ಹೌದು.

ಅಧ್ಯಕ್ಷರು : ಈಗಾಗಲೇ ಅವರು ಕೊಟ್ಟಿರುವ ಉತ್ತರವನ್ನು ನೀವು ಸರಿಯಾಗಿ ಓದಿಕೊಂಡಿಲ್ಲ ಭೂಮಿ ಸ್ವಾಧೀನ ಮಾಡಿಕೊಳ್ಳುವುದು ತಡವಾಗಿದೆ ಎಂದು ಹೇಳಿದ್ದಾರೆ. ಆದಷ್ಟು ಬೇಗ ಭೂಮಿ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳದೇ ಇವರು ಕೆಲಸ ಪ್ರಾರಂಭ ಮಾಡುವುದಕ್ಕೆ ಆಗುವುದಿಲ್ಲ. ಯಾರದೋ ಭೂಮಿಯಲ್ಲಿ ಸರ್ಕಾರದ ಹಣವನ್ನು ಉಪಯೋಗಿಸಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಭೂಮಿಯನ್ನು ಮೊದಲು ಸ್ವಾಧೀನಕ್ಕೆ ತೆಗೆದುಕೊಳ್ಳಲಿ. ಇದನ್ನು ತೆಗೆದುಕೊಂಡ ನಂತರ ಬೇಗ ಹಣವನ್ನು ಬಿಡುಗಡೆ ಮಾಡಿಸಿ ಆ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಸೂಚನೆ ಕೊಡಿ.

ಶ್ರೀ ಕೆ.ಎನ್. ಗದ್ದಿ : ಯಾವಾಗ ಇದನ್ನು ಮಾಡುತ್ತಾರೆ?

ಶ್ರೀ ವೈಜನಾಥ ಪಾಟೀಲ್ : ಈ ಅಕ್ವಿಸಿಷನ್ ಪ್ರೊಸೀಡಿಂಗ್ಸ್

ಅಧ್ಯಕ್ಷರು : ಈ ಅಕ್ವಿಸಿಷನ್ ಪ್ರೊಸೀಡಿಂಗ್ಸ ಮತ್ತೊಂದು ಎಂದು ಹೇಳಿ ನೆಪಗಳನ್ನು ಹೇಳಿ ಬಹಳ ನಿಧಾನ ಮಾಡುವುದು ಬೇಡ. ಆದಷ್ಟು ಬೇಗ ಮಾಡಿಕೊಡುತ್ತಾರೆ ಗದ್ದಿಯವರೇ,

ಶ್ರೀ ವೈಜನಾಥ ಪಾಟೀಲ್ : ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಶಿವಪ್ಪ : ಇಂಥ ಸಂದರ್ಭದಲ್ಲಿ ಭೂ ಸ್ವಾಧೀನ ನಡವಳಿಕೆಗಳು ಬಹಳ ನಿಧಾನವಾಗುವುದರಿಂದ ಸೆಕ್ಷನ್ 17 ಇನ್‌ವೋಕ್ ಮಾಡಿ ಜನರಿಗೆ ಅನುಕೂಲವಾಗುವ ಹಾಗೆ ವ್ಯವಸ್ಥೆಯನ್ನು ಮಾಡುತ್ತಾರಾ? ಏಕೆಂದರೆ ಎಮರ್‌ಜೆನ್ಸಿ ಕ್ಲಾಸ್ ಮಾಡಿದರೆ ಬೇಗ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಸ್ವಾಧೀನ ತೆಗೆದುಕೊಂಡು ಬೇಗ ಕೆಲಸವನ್ನು ಪ್ರಾರಂಭ ಮಾಡಬಹುದು.

MR. SPEAKER : Probably the intention of the Hon. Member behind asking this supplementary is that there has been inordinate delay in supplying the drinking water and the Government should hasten the process of land acquisition.

SRI H. SHIVAPPA : Sir, there is special emergency clause under Section 17 of the Land Acquisition Act. Why don't the Government invoke this emergency clause?

MR. SPEAKER : That is true. It is a good supplementary. What the Hon. Member desires is, in the interest of the public, you should invoke the emergency clause and expediate the process of land acquisition. I think, there should not be any difficulty for the Government. Please say, Yes. Wherever the public interest is involved, you invoke that clause. I am thankful to Mr. Shivappa for making that good suggestion through supplementary question.

ಶ್ರೀ ವೈಜನಾಥ್ ಪಾಟೀಲ್ : ಆಗಲೀ, ವಿಚಾರ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ರಾಣಿಬೆನ್ನೂರು ಮತ್ತು ಬ್ಯಾಡಗಿ ಕುಡಿಯುವ ನೀರು ಸರಬರಾಜು

336 - ಶ್ರೀ ವಿ.ಎಸ್. ಖರ್ಜಗಿ (ರಾಣೆಬನ್ನೂರು) : ಮಾನ್ಯ ನಾಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಂಗಭದ್ರ ನದಿಯಿಂದ ರಾಣೆಬೆನ್ನೂರು ಹಾಗೂ ಬ್ಯಾಡಗಿಗೆ ಕುಡಿಯುವ ನೀರು ಪೂರೈಕೆ ಮಾಡುವ ಕಾರ್ಯವು ಮಂದಗತಿಯಿಂದ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇಲ್ಲಿಯವರೆಗೆ ಆದ ವೆಚ್ಚ ಹಾಗೂ ಪ್ರಗತಿ ಎಷ್ಟು?*

ಇ) *ಈ ಯೋಜನೆಯು ಎಷ್ಟು ದಿನಗಳಲ್ಲಿ ಮುಗಿಯಬಹುದು?*